ಕರ್ನಾಟಕ ಲೋಕಾಯುಕ್ತ

DRE-2

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\3552\2014\ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 22.12.2016

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ತುಮಕೂರು ಜಿಲ್ಲೆಯ ಕುಣಿಗಲ್ಲ ಪಟ್ಟಣದ 4ನೇ ವಾರ್ಡ್‌ಗೆ ಸೇರಿದ ಬೈರಾಗಿ ಮಠದ ಬೀದಿಯ ಖಾತೆ ನಂ: 1333/337 ಸ್ವತ್ತು ಪುರಸಭೆಯ ಖಾಲಿ ನಿವೇಶನವಾಗಿದ್ದು ಈ ಸ್ವತ್ತನ್ನು ಕೆಂಚಪ್ಪ ತಂದೆ ಕರಿಯಪ್ಪ ಈತನಿಂದ ವಶ ಪಡಿಸಿಕೊಂಡು ಪುರಸಭೆಯ ಸುಪರ್ತಿಗೆ ಪಡೆಯುವಂತೆ ಸಕ್ಷಮ ಪ್ರಾಧಿಕಾರಕ್ಕೆ ಶಿಪಾರಸ್ಸು ಮಾಡುವ ಕುರಿತು.

*******

ಶ್ರೀ.ಎ.ಎಸ್. ಮೋಹನ್‌ಕುಮಾರ್, ಪ್ರಾಂಶುಪಾಲರು, ವಿಜಯ ವಾಣಿಜ್ಯ ವಿದ್ಯಾ ಶಾಲೆ ಮತ್ತು ಕಂಪ್ಯೂಟರ್ ಎಜುಕೇಷನ್ ಅಮೃತೂರು ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ.ಚೇತನಕುಮಾರ್.ಪಿ– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕುಣಿಗಲ್ ತಾಲ್ಲುಕು ತುಮಕೂರು ಜಿಲ್ಲೆ (ಇನ್ನು ಮುಂದೆ "ಎದುರುದಾರ ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ಕುಣಿಗಲ್ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ 2011–12ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಸ್ತ್ರೀ ಶಕ್ತಿ ಗುಂಪಿನ ಸದಸ್ಯರು ಹಾಗೂ ಬಡ ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ



Scanned By Scanner Go

BD-3552/2014/DRE-2

ನೀಡುವ ಕಾರ್ಯಕ್ರಮದಲ್ಲಿ 36 ಬಡ ಮಹಿಳೆಯರಿಗೆ ಕಂಪ್ಯೂಟರ್ ತರಬೇತಿ ನೀಡುವ ಕಾರ್ಯಕ್ರಮದಲ್ಲಿ ಎದುರುದಾರರು ಕಾನೂನು ಉಲ್ಲಂಘಿಸಿ ನಿಯಮಬಾಹೀರವಾಗಿ ಹಣ ದುರುಪಯೋಗ ಮಾಡಿಕೊಂಡಿರುತ್ತಾರೆ. ಆದ್ದರಿಂದ ಈ ಬಗ್ಗೆ ಕೂಲಂಕುಷ ತನಿಖೆ ನಡೆಸಿ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿ: 15.7.2010ರಂದು ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ತುಮಕೂರು ರವರು ವಿಶೇಷ ಅಭಿವೃದ್ಧಿ ಯೋಜನೆಯಡಿ ಸ್ತ್ರೀ ಶಕ್ತಿ ಗುಂಪಿನ ಸದಸ್ಯರು ಹಾಗೂ ಬಡ ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿಗಾಗಿ 1ಲಕ್ಷ ಅನುದಾನವನ್ನು ನೀಡಿದ್ದರು. ಆ ಪ್ರಕಾರ ಕಿಯೋನಿಕ್ಸ್ ಸಂಸ್ಥೆಯಿಂದ ಅನುಮೋದನೆ ಪಡೆದ ಆರ್.ಆರ್. ಕಂಪ್ಯೂಟರ್ಸ್ ಅಮೃತ್ತೂರು ರವರ ಮೂಲಕ ತರಬೇತಿಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಇದರಲ್ಲಿ 36 ಫಲಾನುಭವಿಗಳಿಗೆ ತರಬೇತಿಯನ್ನು ನೀಡಿದ್ದು ಇರುತ್ತದೆ. ಆದ್ದರಿಂದ ಯಾವುದೇ ಹಣ ದುರುಪಯೋಗವಾಗಿರುವುದಿಲ್ಲ ಕಾರಣ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4)ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರ್ ಉಚ್ಚರಿಸಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ: (ಅ):-

| ಕ್ರಮ ಸಂ | ಲಭ್ಯವಿರುವ ಕೋರ್ಸ್ | ನಿಗಧಿತ ಹಣ | ಒಟ್ಟು ಫಲಾನುಭವಿಗಳು | ಒಟ್ಟು ಮೊತ್ತ |
|---|---|---|---|---|
| 1 | ಕೋರ್ಸ್ ಫೀಸ್ (3 ತಿಂಗಳು) | 1800/- | 36*1800 | 64800/- |
| 2 | ಅರ್ಜಿ ಶುಲ್ಕ (ಒಬ್ಬರಿಗೆ) | 50/- | 36*50 | 1840/- |
| 3 | ಕಿಟ್ಟ ಮತ್ತು ಕಚ್ಚಾ ಸಾಮಗ್ರಿ (ಒಬ್ಬರಿಗೆ) | 177.08 | 36*177.08 | 6400.08 |
| 4 | ಭೊಧನಾ ಶುಲ್ಕ (ಒಬ್ಬರಿಗೆ) | 750 | 36*750 | 27000/- |
| | | | ಒಟ್ಟು ವೆಚ್ಚ | 100000.08 |



Scanned By Scanner Go

BD-3552/2014/DRE-2

ಆ)ಕಿಯೋನಿಕ್ಸ್ ನಿಗಮಧ ನಿಯಮಾವಳಿಗಳ ಪ್ರಕಾರ 3 ತಿಂಗಳಿಗೆ ಒಬ್ಬ ಅಭರ್ಥಿಗೆ 1800/- ತರಬೇತಿ ಶುಲ್ಕ ನೀಡಲಾಗಿರುತ್ತದೆ. ಆದರೆ ಕಂಪ್ಯೂಟರ್ ಸಂಸ್ಥೆಯು ದಿ: 1.4.2011 ರಿಂದ 15.6.2011 ರವರೆಗೆ (21/2 ತಿಂಗಳು) ಮಾತ್ರ ತರಬೇತಿಯ ಪ್ರಮಾಣ ಪತ್ರ ನೀಡಿರುತ್ತಾರೆ. ಅಂದರೆ 3 ತಿಂಗಳ ಕೋರ್ಸ್ ಫೀ ಪಡೆದು 21/2 ತಿಂಗಳು ಮಾತ್ರ ತರಬೇತಿ ನೀಡಿರುತ್ತಾರೆ.

ಇ)ಅರ್ಜಿ ಶುಲ್ಕ 10ರೂಗಳಾಗಿದ್ದು ಆದರೆ ಸಂಸ್ಥೆಯವರು ತಲ 50 ರೂಗಳ ಶುಲ್ಕ ವಿಧಿಸಿರುತ್ತಾರೆ. ಯಾವುದೇ ಕಿಟ್ ಮತ್ತು ಕೋಸ್ ಮೆಟಿರಿಯಲ್ ನೀಡದೆ 6400/- ರೂಗಳ ಹಣ ಪಡೆದಿರುತ್ತಾರೆ.

ಈ)ಒಬ್ಬ ಅಭ್ಯರ್ಥಿಗೆ ತರಬೇತಿ ನೀಡಲು 1800/- ಶುಲ್ಕ ನೀಡಿದ್ದರೂ ಸಹ ಭೋದನಾ ಶುಲ್ಕ ವೆಂದು 3 ತಿಂಗಳಿಗೆ ಒಬ್ಬ ಅಭ್ಯರ್ಥಿಗೆ 750/-ರೂಗಳಂತೆ 36 ಅಭ್ಯರ್ಥಿಗಳಿಗೆ ಒಟ್ಟು 26000/-ರೂಗಳನ್ನು ಪಡೆದಿರುತ್ತಾರೆ. ಅಂದರೆ ಈ ತರಬೇತಿಗೆ ಯಾವುದೇ ಬೋದನಾ ಶುಲ್ಕ ನೀಡುವಂತಿಲ್ಲವೆಂದು ದೂರುದಾರರು ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಪಡೆದ ದಾಖಲೆಗಳ ಆಧಾರದ ಮೇಲೆ ತಿಳಿಸಿದ್ದಾರೆ.

ಉ)ಎದುರುದಾರರು ತಮ್ಮ ಆಕ್ಷೇಪಣೆಯೊಂದಿಗೆ ಯಾವ ಅಬ್ಯರ್ಥಿಗೆ ತರಬೇತಿ ನೀಡಲಾಯಿತು, ತರಬೇತಿಯ ಅವಧಿ ಅವರಿಗೆ ನೀಡಿದ ಪ್ರಮಾಣ ಪತ್ರಗಳ ಪ್ರತಿಯನ್ನು ಸಲ್ಲಿಸಿರುತ್ತಾರೆ. ಆದರೆ ದಾಖಲೆಗಳ ಪ್ರಕಾರ ಕಡಿಮೆ ಅವಧಿಯ ತರಬೇತಿ ನೀಡಿ ಹೆಚ್ಚು ಹಣ ಪಾವತಿಸಿರುವುದು, ನಿಗಧಿತ ಶುಲ್ಕಕ್ಕಿಂತ ಹೆಚ್ಚು ಶುಲ್ಕ ಪಾವತಿಸಿರುವುದು ಕಂಡುಬರುತ್ತದೆ. ಎದುರುದಾರರು ಈ ತರಬೇತಿಯ ನೀಡಿದ ಸಂಸ್ಥೆಗೆ ಹಣ ಪಾವತಿಸುವ ಅಧಿಕಾರಿಯಾಗಿದ್ದು ಅವರು ಇದೇಲ್ಲವನ್ನು ಸರಿಯಾಗಿ ಪರಿಶೀಲಿಸದೆ ಅಥವಾ ಇದೇಲ್ಲ ತಿಳಿದಿದ್ದರೂ ಸಹ ಅಕ್ರಮವಾಗಿ ಹೆಚ್ಚು ಹಣವನ್ನು ಕಂಪ್ಯೂಟರ್ ಸಂಸ್ಥೆಗೆ ನೀಡಿರುವುದು ಕಂಡುಬರುತ್ತದೆ.



Scanned By Scanner Go

BD-3552/2014/DRE-2

ಆದ್ದರಿಂದ ಎದುರುದಾರರು ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ಅಕ್ರಮವಾಗಿ ಹೆಚ್ಚು ಹಣ ಪಾವತಿಸಿ ಕರ್ತವ್ಯ ದುರುಪಯೋಗ ಪಡಿಸಿಕೊಂಡಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

6) ಈ ಪ್ರಕರಣದಲ್ಲಿ ಎದುರುದಾರರು ಈ ಕೆಳಗಿನಂತೆ ಹೆಚ್ಚು ಹಣ ಪಾವತಿಸಿರುವುದು ದಾಖಲೆಗಳಿಂದ ಕಂಡುಬರುತ್ತದೆ.

| ಕ್ರ ಸಂ | ಕೋರ್ಸನ ಅವಧಿ | ವ್ಯತ್ಯಾಸ ಮೊತ್ತ | ದುರುಪಯೋಗವಾದ ಮೊತ್ತ |
|---|---|---|---|
| 1 | 21/2 ತಿಂಗಳು ಮಾತ್ರ ತರಬೇತಿ ನೀಡಿ 3 ತಿಂಗಳ ಅವಧಿಯ ತರಬೇತಿ ಹಣ ಪಾವತಿಸಿರುವುದು | 36*300 | 10800/- |
| 2 | ಅರ್ಜಿ ಶುಲ್ಕ | 36*40 | 1440 |
| 3 | ಕಿಟ್ ಮತ್ತು ಕಚ್ಚಾ ಸಾಮಗ್ರಿ | 36*177.08 | 6374.88 |
| 4 | ಭೋದನಾ ಶುಲ್ಕ | 36*750/- | 27000/- |
| | | ಒಟ್ಟು ಮೊತ್ತ | 45,614/- |

7) ಈ ರೀತಿ ಈ ತರಬೇತಿಯಲ್ಲಿ ಒಟ್ಟು ಎದುರುದಾರರು 45614/- ರೂಗಳ ಹಣ ದುರುಪಯೋಗ ಮಾಡಿರುವುದು ಕಂಡುಬರುತ್ತದೆ. ಎದುರುದಾರರು ದುರುಪಯೋಗ ಪಡಿಸಿಕೊಂಡ ಮೊತ್ತವನ್ನು ಅವರಿಂದ ಪುನಃ ಸರ್ಕಾರಕ್ಕೆ ಪಾವತಿಸಿಕೊಂಡು ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1) ರಡಿಯಲ್ಲಿ ನಿರ್ದೇಶಿಸುವುದು ಅಗತ್ಯವಾಗಿರುತ್ತದೆ. ಹಿಗಾಗಿ ಮಾನ್ಯ ಜಿಲ್ಲಾಧಿಕಾರಿಗಳು ತುಮಕೂರು ಇವರಿಗೆ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಆದೇಶಿಸುವ ಅಧಿಕಾರವನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1)ರಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಹೊಂದಿದ್ದಾರೆ.

8) ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ



Scanned By Scanner Go

BD-3552/2014/DRE-2

ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಮಾನ್ಯ ಉಪಲೋಕಾಯುಕ್ತ-2 ರವರಿಗೆ ತಿಳಿಸಲು ಹೇಳಿದೆ.

Sd/- 22/12/16.

(ನ್ಯಾಯಾಮೂರ್ತಿ ಸುಬಾಷ್ ಬಿ ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ

22/12

Scanned By Scanner Go